ವಿಷಯ:- ಗ್ರಾಮಾಂತರ ಪ್ರದೇಶದ ಮಹಿಳೆಯರಿಗೆ ವಿಶೇಷ ಶೌಚಾಲಯ.

10(83)

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಗ್ರಾಮಾಂತರ ಪ್ರದೇಶದಲ್ಲಿ ಮಹಿಳೆಯರಿಗಾಗಿ ವಿಶೇಷ ಶೌಚಾಲಯ ನಿರ್ಮಿಸಲು ಸರ್ಕಾರಕ್ಕೆ ಸಾಧ್ಯವಿಲ್ಲವೇ; ಇರುವ ತೊಂದರೆಗಳೇನು;

ಆ) ಪ್ರತಿ ಹಳ್ಳಿಗಳಲ್ಲೂ ನೀರಿನ ಸೌಲಭ್ಯಗಳನ್ನೊಳಗೊಂಡ ಶೌಚಾಲಯ ನಿರ್ಮಾಣ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು):-

ಅ) ಸರ್ಕಾರವು ''ನಿರ್ಮಲ ಗ್ರಾಮ ಯೋಜನೆ'' ಯಡಿ ಕೌಟುಂಬಿಕ ಶೌಚಾಲಯ-ಗಳನ್ನು ನಿರ್ಮಿಸುವ ಬೃಹತ್ ಕಾರ್ಯಕ್ರಮವನ್ನು ಈಗಾಗಲೇ ಹಮ್ಮಿಕೊಂಡಿದ್ದು, ಅನುಸ್ಥಾನಗೊಳಿಸಲಾಗುತ್ತಿದೆ. ಸಾಮೂಹಿಕ ಶೌಚಾಲಯಗಳನ್ನು ನಿರ್ಮಿಸಿದಲ್ಲಿ, ನಿರ್ವಹಣೆಯ ತೊಂದರೆ ಇರುತ್ತಿದೆ.

ಆ) ಗ್ರಾಮೀಣ ಪ್ರದೇಶದಲ್ಲಿ ಕಟ್ಟಲಾಗುತ್ತಿರುವ ಶೌಚಾಲಯಗಳು 'ಪೋರ್ ಫ್ಲಷ್' ಮಾದರಿಯಲ್ಲಿ ಇರುವುದರಿಂದ, ಅತಿ ಕಡಿಮೆ ಪ್ರಮಾಣದ ನೀರಿನಲ್ಲಿ ಸ್ವಚ್ಛವಾಗಿಟ್ಟು-ಕೊಳ್ಳಬಹುದಾಗಿದೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ಇವರ ಉತ್ತರದಲ್ಲಿ ನಿರ್ಮಲ ಗ್ರಾಮ ಯೋಜನೆ, ಎಂದು ಹೇಳಿದ್ದಾರೆ. ನಿರ್ಮಲ ಗ್ರಾಮ ಯೋಜನೆಯೋ ನಿರ್ನಾಮ ಗ್ರಾಮ-ಯೋಜನೆಯೋ ನಿರ್ಮೂಲ ಗ್ರಾಮ ಯೋಜನೆಯೋ ಅರ್ಥವಾಗುತ್ತಿಲ್ಲ. ಸ್ವಾತಂತ್ರ್ಯ ಬಂದು ನಾವು 50 ವರ್ಷಗಳನ್ನು ತಲುಪುತ್ತಿದ್ದೇವೆ. ಇನ್ನೂ ಮಹಿಳೆಯರಿಗೆ ಮಲ ಮತ್ತು ಮೂತ್ರ ವಿಸರ್ಜನೆಗೆ ಸ್ವಾತಂತ್ರ್ಯ ಸಿಕ್ಕಿಲ್ಲ. ರಾತ್ರಿ ಸಂದರ್ಭಕ್ಕೆ ಅವರು ಕಾಯಬೇಕು. ಬೇಲಿ ಪಕ್ಕದಲ್ಲಿ ಅವರು ಹೋಗಿ ಕುಳಿತುಕೊಳ್ಳಬೇಕು. ಕಾರು ಲಾರಿ ಏನಾದರೂ ಬಂದ ತಕ್ಷಣ ಅವರು ಎದ್ದು ನಿಂತುಕೊಳ್ಳಬೇಕು. ಆಮೇಲೆ ಅವರು ಕುಳಿತುಕೊಳ್ಳಬೇಕು. ಈ ಒಂದು ಅನಿಷ್ಟವಾದಂತಹ ಪರಿಸ್ಥಿತಿ ನಮ್ಮ ಇಡೀ ದೇಶದಲ್ಲಿ ನಿರ್ಮಾಣ ಆಗಿದೆ. ಅನೇಕ ಯೋಜನೆಗಳನ್ನು ಮಾಡುತ್ತಿದ್ದೇವೆ. ಮಹಿಳೆಯರಿಗೆ ವಿಶೇಷವಾದ ಸೌಲತ್ತುಗಳನ್ನು ಕೊಡುತ್ತೇವೆ. ಶಾಸನಸಭೆ ಮತ್ತು ಪಾರ್ಲಿಮೆಂಟ್‌ಗಳಿಗೆ ಶೇಕಡ 35ರಷ್ಟು ಕೊಡಬೇಕೆಂದು ಹೇಳುತ್ತೇವೆ. ಈ ರೀತಿ ಮೊಸಳೆ ಕಣ್ಣೀರು ಸುರಿಸುತ್ತಿದ್ದೇವೆ. ನಾನು ತಮಗೆ ಒಂದು ಮಾತು ಹೇಳುತ್ತಿದ್ದೇನೆ. ಪ್ರತಿ ಒಂದು ಗ್ರಾಮಗಳಿಗೆ ಸುಸುಜ್ಜಿತವಾದಂತಹ ಶೌಚಾಲಯಗಳನ್ನು ಕಟ್ಟಿಸುವುದಕ್ಕೆ ಈ ವರ್ಷ ಮುಂದೆ ಬರತಕ್ಕಂಥ ಆಯವ್ಯಯದಲ್ಲಿ ತಾವು ಎಷ್ಟು ಹಣ ಒದಗಿಸುತ್ತೀರಿ ಎನ್ನತಕ್ಕಂಥ ಸ್ಪಷ್ಟ ಭರವಸೆಯನ್ನು ತಾವು ನೀಡುತ್ತೀರಾ? ಈ ನಿರ್ಮಲ ಗ್ರಾಮ ಇದೆಲ್ಲಾ ಬರೀ ಅರ್ಥವಿಲ್ಲದ್ದು. ನನಗೆ ನಾಚಿಕೆಯಾಗುತ್ತದೆ.

ಬೇಲಿ ಪಕ್ಕದಲ್ಲಿ ಕುಳಿತು ಮೂತ್ರ ಮಾಡುವ ಪದ್ದತಿಯನ್ನು ತಪ್ಪಿಸಿ ಮಹಿಳೆಯರನ್ನು ಆ ಬಂಧನದಿಂದ ಬಿಡುಗಡೆ ಮಾಡುತ್ತೀರಾ? ಇಲ್ಲದಿದ್ದರೆ ಇದು ಮಹಿಳೆಯರಿಗೆ ಮಾಡುವ ಅಗೌರವ. ಇದು ಮಹಿಳೆಯರಿಗೆ ಮಾಡತಕ್ಕಂಥ ಅಪಮಾನ ಮಹಿಳೆಯರಿಗೆ ಮಾಡತಕ್ಕಂಥ ದ್ರೋಹ ಎನ್ನತಕ್ಕಂಥ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್:- ಮಾನ್ಯ ಅಧ್ಯಕ್ಷರೇ, ಮಾನ್ಯ ವಾಟಾಳ್ ನಾಗರಾಜ್ ಅವರು ಹೇಳಿದಂತೆ ಇದು ಬಹಳ ಅಗೌರವ ಅಪಮಾನಕರವಾದಂತಹ ನಾವು ಇದಕ್ಕೆ ತಲೆತಗ್ಗಿಸುವಂತಹ ಸಂಗತಿ ಇದರಲ್ಲಿ ಅನ್ಯ ಮಾತುಗಳು ಇಲ್ಲ. ಆದ್ದರಿಂದಲೇ ನಾವು ನಿರ್ಮಲ ಕರ್ನಾಟಕ ಗ್ರಾಮ ಯೋಜನೆ ಎಂದು ರೂಪಿಸಿ ಕಳೆದ 10 ವರ್ಷಗಳಲ್ಲಿ ಒಂದು ಲಕ್ಷ 7 ಸಾವಿರ ನಿರ್ಮಲ ಶೌಚಾಲಯಗಳನ್ನು ಮಾತ್ರ ಮಾಡುವುದಕ್ಕೆ ಸಾಧ್ಯವಾಗಿದೆ. ಇದಕ್ಕೆ ವಿಶೇಷವಾದ ಒತ್ತುಕೊಟ್ಟು ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರಿನ ಅಭಾವ ಇರತಕ್ಕಂಥಾದ್ದಕ್ಕೆ ಯಾವಾಗಲೂ ಗುಂಪು ಶೌಚಾಲಯಗಳನ್ನು ಮಾಡಿದರೆ ಅದನ್ನು ಸುಸ್ಥಿತಿಯಲ್ಲಿ ಇಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ ಎನ್ನುವುದನ್ನು ಮನಗಂಡು 1995 ಅಕ್ಟೋಬರ್‌ನಿಂದ 1996 ಅಕ್ಟೋಬರ್‌ಗೆ ಎರಡೂವರೆ ಲಕ್ಷ ಕುಟುಂಬಿಕ ಶೌಚಾಲಯಗಳನ್ನು ಕಟ್ಟಿದ್ದೇವೆ. ಇಡೀ ದೇಶದಲ್ಲಿ ಇದಕ್ಕಾಗಿ ಇಟ್ಟಿರತಕ್ಕಂತ ಹಣ 60 ಕೋಟಿ ರೂಪಾಯಿಗಳು ಇದ್ದರೆ ಕರ್ನಾಟಕದಲ್ಲಿದಕ್ಕಾಗಿ ಇಟ್ಟಿರತಕ್ಕಂಥ ಹಣ 90 ಕೋಟಿ ರೂಪಾಯಿಗಳು. 1650 ರೂಪಾಯಿಗಳನ್ನು ಬಡತನ ರೇಖೆಗಿಂತ ಕೆಳಗೆ ಇರತಕ್ಕಂಥವರಿಗೆ ಮುಪ್ಪತ್ತಾಗಿ ಕೊಡುತ್ತೇವೆ. ಬಡತನ ಸೀಮಾ ರೇಖೆಗಿಂತ ಮೇಲ್ಪಟ್ಟು ಯಾರೇ ಆಗಿರಬಹುದು ಅವರು ಯಾವ ಜಾತಿಯವರೇ ಆಗಿರಲಿ ಅವರು ಎಷ್ಟೇ ಶ್ರೀಮಂತರಾಗಿರಲಿ ಅವರಿಗೆ 1200 ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದೇವೆ. ಈ ಬಗ್ಗೆ ಜಾಗೃತಿ ಮೂಡಿಸುವುದಕ್ಕಾಗಿ ಪ್ರಚಾರಾರ್ಥವಾಗಿ ಶೇಕಡ 10 ಭಾಗವನ್ನು ಮೀಸಲಿಡಬೇಕು, ಸಾರ್ವಜನಿಕ ಶಾಲೆಗಳಲ್ಲಿ ಬಸ್ಸು ನಿಲ್ದಾಣಗಳಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಶೌಚಾಲಯಗಳನ್ನು ಕಟ್ಟಿಕೊಡಬೇಕೆನ್ನುವ ಆದೇಶವನ್ನೂ ಸಹ ಕೊಟ್ಟಿದ್ದೇವೆ. ಮತ್ತು ಅಲ್ಲಿ ಇರುವಂತಹ ಸ್ವಯಂ ಸೇವಕರೇ ಆಗಲಿ ಗ್ರಾಮ ಸಭೆಯವರೇ ಆಗಲಿ ಒಬ್ಬರಿಗೆ ಶೌಚಾಲಯವನ್ನು ಕಟ್ಟಿಕೊಡಲು ಪ್ರೇರೇಪಣೆ ಮಾಡಿದರೆ ಅವರಿಗೆ 25 ರೂಪಾಯಿಗಳು ಪ್ರೇರೇಪಣೆ ಹಣವನ್ನೂ ಸಹ ಕೊಡುತ್ತೇವೆಂದು ಮಾಡಿದ್ದೇವೆ. ಇದು ನಿಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ವೈಶಾಖ ಎನ್ನುವ ಒಂದು ಕಾದಂಬರಿಯನ್ನು ಬರೆದಿದ್ದಾರೆ. ಅದರಿಂದಲೂ ನಾವು ಪ್ರೇರಣೆಯನ್ನು ಪಡೆದಿದ್ದೇವೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ನನ್ನ ಪ್ರಕಾರ ಇವರ ಶೌಚಾಲಯಗಳನ್ನು ಶೌಚಾಲಯಗಳೆಂದು ನಾನು ಪರಿಗಣಿಸಿಲ್ಲ. ಆ ಶೌಚಾಲಯಕ್ಕೆ ಹೋಗುವ ಬದಲು ಬೇಲಿಯೇ ವಾಸಿ ಎನ್ನುವ ಮಟ್ಟಕ್ಕೆ ಬಂದಿದೆ. ಸುಸಜ್ಜಿತವಾದ ಶೌಚಾಲಯಗಳನ್ನು ಕಟ್ಟಿಸುವುದಕ್ಕೆ ಒಂದು ವಿಶೇಷ ಯೋಜನೆ ರೂಪಿಸಬೇಕು. ಅದರಲ್ಲಿ ಬಡತನ ಮತ್ತು ಸಿರಿವಂತಿಕೆ ಬೇಡ. ಪ್ರತಿ ಹಳ್ಳಿಯಲ್ಲಿಯೂ ಹೆಣ್ಣುಮಕ್ಕಳಿಗೆ ವಿಶೇಷವಾಗಿ ಒಂದು ಹಳ್ಳಿಗೆ 4 ರಂತೆ ಉತ್ತಮವಾದ ಶೌಚಾಲಯಗಳನ್ನು ಕಟ್ಟತಕ್ಕಂತಹ ಭರವಸೆಯನ್ನು ಮಾನ್ಯ ಮಂತ್ರಿಗಳು ಕೊಡಬೇಕು ಎಂದು ನಾನು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್:- ಮಾನ್ಯ ಶಾಸಕರು ವ್ಯಕ್ತ ಪಡಿಸಿದ ಅಭಿಪ್ರಾಯಕ್ಕೆ ನನ್ನ ಸಂಪೂರ್ಣವಾದ ಸಹಮತ ಇದೆ. ನರಕ ಸದುಶ್ಯವಾಗಿರತಕ್ಕಂಥ ಸಮೂಹ ಶೌಚಾಲಯಗಳನ್ನು ಮನಗಂಡೇ ಅವುಗಳನ್ನು ಸುಸ್ಥಿತಿಯಲ್ಲಿ ಇಡಲು ಸಾಧ್ಯವಾಗಲಾರದ ಕಾರಣಕ್ಕಾಗಿಯೇ ಕುಟುಂಬ ಶೌಚಾಲಯಗಳು ಇದ್ದರೆ ಅವರು ತಮ್ಮ ಮಟ್ಟಿಗೆ ಚೆನ್ನಾಗಿ ಇಟ್ಟುಕೊಳ್ಳಬಹುದು ಎನ್ನುವ ಕಾರಣಕ್ಕಾಗಿಯೇ ಹಣ ಕೊಡುತ್ತಿದ್ದೇವೆ. ಇನ್ನೂ ಹೆಚ್ಚಿನ ಹಣವನ್ನು ಕೊಡಬೇಕೆನ್ನುವ ಯೋಚನೆಯನ್ನೂ ಸಹ ನಾವು ಮಾಡಿದ್ದೇವೆ.

12.00 ಪಿಎಂ

ಶ್ರೀ ವಾಟಾಳ್ ನಾಗರಾಜ್:- ಈ ಸರ್ಕಾರ ಸರಿಯಿಲ್ಲ.

ಅಧ್ಯಕ್ಷರು:- ಇನ್ನೂ ಹೆಜ್ಜಾಲದ ವಿಷಯ ಇದೆಯಲ್ಲಾ.

ಶ್ರೀ ವಾಟಾಳ್ ನಾಗರಾಜ್:- ಇದು ಬಹಳ ಪ್ರಾಮುಖ್ಯವಾದ ವಿಷಯ. ಇದರ ಬಗ್ಗೆ ತಮಗೆ ಮನವರಿಕೆ ಮಾಡಿಕೊಡುತ್ತಿದ್ದೇನೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು 50 ವರ್ಷಗಳಾಗಿದ್ದರೂ ಮಹಿಳೆಯರಿಗೆ ಶೌಚಾಲಯಗಳನ್ನು ಕಲ್ಪಿಸಿಕೊಡುವುದಕ್ಕಾಗಲಿಲ್ಲ.

ಅಧ್ಯಕ್ಷರು:- ಮಾಡುತ್ತೇವೆಂದು ಹೆಳಿದ್ದಾರಲ್ಲ !

ಶ್ರೀ ವಾಟಾಳ್ ನಾಗರಾಜ್:- ಒಂದು ಮೂಟೆ ಸಿಮೆಂಟ್, ಎರಡು ಕಲ್ಲು ಕೊಟ್ಟು ನೀವೇ ಮಾಡಿಕೊಳ್ಳಿ ಎಂದರೆ ಅದು ಯಾವ ಶೌಚಾಲಯ? ಆ ಶೌಚಾಲಯಕ್ಕೆ ಬೆಂಕಿ ಹಾಕಿತು. ಆ ವ್ಯವಸ್ಥೆ ಸರಿಯಿಲ್ಲ. ಇದು ಅತ್ಯಂತ ನಾಚಿಗೆಗೇಡು. ಮಹಿಳಾ ವರ್ಷ ಎಂದು ಹೇಳುತ್ತಾರೆ, ಮಹಿಳಾ ಕಲ್ಯಾಣ ಎಂದು ಹೇಳುತ್ತಾರೆ. ಇದರ ಬಗ್ಗೆ ನಾನು ವಿರೋಧಿಸಿ ಸಭಾ ತ್ಯಾಗವನ್ನು ಮಾಡುತ್ತಿದ್ದೇನೆ.

(ಮಾನ್ಯ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು).

ಶ್ರೀ ಜಿ.ವಿ. ಶಿವಕುಮಾರ್:- ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ಮಾತ್ರವೇ ಮಹಿಳೆಯರ ಬಗ್ಗೆ ಕಳಕಳಿ ಇರುವುದು? ಇನ್ನು ಬೇರೆ ಯಾರಿಗೂ ಇಲ್ಲವೇ?

ವಿಷಯ:- ಬೆನಕಟ್ಟಿ ಗ್ರಾಮಕ್ಕೆ ಕುಡಿಯುವ ನೀರಿನ ಯೋಜನೆ.

11(200)

ಶ್ರೀ ರಾಜಶೇಖರ ಶೀಲವಂತ (ಗುಳೇದಗುಡ್ಡ):- ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

1) ಬೆನಕಟ್ಟಿ ಗ್ರಾಮದಲ್ಲಿ ಕುಡಿಯುವ ನೀರಿನ ಬವಣೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

2) ಹಾಗಿದ್ದಲ್ಲಿ, ಶಾಶ್ವತ ಕುಡಿಯುವ ನೀರಿನ ಸಮಸ್ಯೆ ಪರಿಹಾರ ಯೋಜನೆಯನ್ನು ವ್ಯವಸ್ಥೆ ಮಾಡುವ ಕುರಿತು ಸರ್ಕಾರ ಯೋಜನೆ ರೂಪಿಸಿದೆಯೇ;

3) ಹಾಗಿದ್ದಲ್ಲಿ, ಯಾವಾಗ ಯೋಜನೆಯನ್ನು ಪ್ರಾರಂಭಿಸುವಿರಿ;